(ಸದನವು 11-06ಕ್ಕೆ ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

(ವಿರೋಧ ಪಕ್ಷದ ಬಿಜೆಪಿ ಸದಸ್ಯರೆಲ್ಲರೂ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ):- ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಏನು ಈ ಪರಿಸ್ಥಿತಿ ನಿರ್ಮಾಣವಾಗಿದೆ ಬಹುಶಃ ಜನ ಇಡೀ ಸದನವನ್ನು ಈ ಸ್ಥಿತಿಯಲ್ಲಿ ಇದೆಯೇ ಎಂದು ಆತಂಕ ಅನುಮಾನದಿಂದ ನೋಡುವಂಥ ಸ್ಥಿತಿಯನ್ನು ನಾವು ನಿರ್ಮಾಣ ಮಾಡಿಕೊಂಡುಬಿಟ್ಟಿದ್ದೇವೆ. ಇದರಲ್ಲಿ ಸರಿ ತಪ್ಪುಗಳು ಚರ್ಚೆ ಆಗಬೇಕಾಗಿದ್ದು ಶಾಸನ ಸಭೆಗೆ ಗೌರವ ತರುವಂಥ ಸ್ಥತಿ. ನಾನು ಸನ್ಮಾನ್ಯ ಯಡಿಯೂರಪ್ಪರವರನ್ನು ಇನ್ನೊಂದು ಸಲ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇನ್ನೊಂದು ಸಲ ಅವರು ಮಾತು ಕತೆಗೆ ತಮ್ಮ ಕೊಠಡಿಗೆ ಅವರು ಬರಬೇಕು. ತಾವು ಅವರನ್ನು ಮತ್ತು ಸರ್ಕಾರದವರನ್ನು ಎಲ್ಲರನ್ನು ಕರೆಸಿ ಒಂದು ಮಾತು ಕತೆ ಮಾಡಿಸಬೇಕು. ಆ ದಿನ ಮಾತುಕತೆ ಆಗುವ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತು ಹೇಳಿದ್ದರು. ಲೋಕೋಪಯೋಗಿ ಸಚಿವರು ಬರಲಿ ಅವರು ಬಂದ ನಂತರ ಹೇಳಿಕೆ ಕೊಡಿಸುತ್ತೇನೆ ಆ ನಂತರ ಬೇಕಾದರೆ ಬೇರೆ ಚರ್ಚೆ ಯಾಗಲಿ ಎಂದು ಹೇಳಿದ್ದರು. ಇವತ್ತು ಗೌರವಾನ್ವಿತ ಲೋಕೋಪಯೋಗಿ ಸಚಿವರು ಸಭೆಯಲ್ಲಿ ಇದ್ದಾರೆ. ಅವರ ಒಂದು ಹೇಳಿಕೆಯನ್ನು ಈ ಸಭೆಯಲ್ಲಿ ತಾವು ಮಾಡಿಸಬೇಕು. ಆ ಬಗ್ಗೆ ಒಂದು ಹತ್ತು ನಿಮಿಷ ಈ ಸದನವನ್ನು ಮುಂದಕ್ಕೆ ಹಾಕಿ ತಮ್ಮ ಕೊಠಡಿಗೆ ಚರ್ಚೆಗೆ ಕರೆದು ಈ ಪರಿಸ್ಥಿತಿಯನ್ನು ಏನಾದರೂ ತಿಳಿ ಮಾಡಬೇಕೆಂದು ನಾನು ತಮ್ಮಲ್ಲಿ ಬೇಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ):- ಮಾನ್ಯ ಅಧ್ಯಕ್ಷರೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಭಾತ್ಯಾಗ, ಧರಣಿ ಇವೆಲ್ಲ ನಡೆಯುವುದು ವಾಡಿಕೆ. ಪರಿಸ್ಥಿತಿ ಇಷ್ಟು ಉಲ್ಬಣವಾಗುತ್ತಿದೆ ಎಂದು ನಾವು ಯಾರೂ ನಿರೀಕ್ಷಣೆ

ಮಾಡಿರಲಿಲ್ಲ. ಮಾನ್ಯ ಯಡಿಯೂರಪ್ಪನವರು ಹಾಗೂ ವಿರೋಧ ಪಕ್ಷದವರು ಕೇಳಿರತಕ್ಕಂಥ ಬೇಡಿಕೆ ಸಾಧುವಾಗಿದೆ. ಮತ್ತು ನ್ಯಾಯವಾಗಿದೆ. ಅದರ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲ. ಆದರೆ ಎಲ್ಲಾದರೂ ಒಂದು ಕಡೆ ಇದು ತೀರಾ ಮುಂದುವರಿಯುತ್ತಿರುವುದು ಒಳ್ಳೆಯ ಸೂಚನೆ ಏನಲ್ಲ. ಈ ವ್ಯವಸ್ಥೆಯಲ್ಲಿ ತಾವು ಬಹಳ ಪ್ರಾಮುಖ್ಯವಾದ ಪಾತ್ರ ವಹಿಸಬೇಕಾಗಿದೆ. ಈ ಸದನವನ್ನು ಸುಲಲಿತವಾಗಿ ನಡೆಸಿಕೊಂಡು ಹೋಗಬೇಕಾದ ಜವಾಬ್ದಾರಿ ತಮಗೆ ಇರತಕ್ಕಂಥದ್ದು. ಆದುದರಿಂದ ತಮಗೆ ತಮ್ಮ ಹೆಗಲ ಮೇಲೆ ಈ ಒಂದು ಸಮಸ್ಯೆ ಬಗೆಹರಿಸತಕ್ಕಂಥದ್ದನ್ನು ನಾವು ಹಾಕುತ್ತಿದ್ದೇವೆ. ದಯಮಾಡಿ ತಾವು ಈಗ ಸದನವನ್ನು ಮುಂದೂಡಿ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಂಬಂಧಪಟ್ಟ ಮಂತ್ರಿಗಳ ಜೊತೆಗೆ ತಾವು ಸ್ಪಷ್ಟವಾಗಿ ಮಾತನಾಡಿ ಈ ಸದನ ಸುಲಲಿತವಾಗಿ ನಡೆದು, ಮುಂದೆ ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕಾಗಿದೆ. ಬಹಳ ಸಮಸ್ಯೆಗಳು ಇವೆ, ಅನೇಕ ಬೇಡಿಕೆಗಳ ಬಗ್ಗೆ ಚರ್ಚೆಯಾಗಬೇಕಾಗಿದೆ. ಪ್ರಶ್ನೋತ್ತರಗಳು, ಗಮನ ಸೆಳೆಯುವ ಸೂಚನೆಗಳು ಇವೆ. ಇವೆಲ್ಲ ಇರುವುದರಿಂದ ಇದು ಒಂದು ರೀತಿಯಲ್ಲಿ ಅಂತ್ಯವಾಗ ಬೇಕಾಗಿದೆ. ಜೊತೆಗೆ ತಾವು ಮಾತುಕತೆ ಆಡುವಾಗ ತಮ್ಮ ಮಾತುಕತೆಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರೂ ಸಹ ಬೆಂಬಲ ಹಾಗೂ ಬೆಲೆ ಕೊಡಬೇಕೆಂದು ನಾವು ಅವರನ್ನು ಕೂಡ ಬಹಳ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇವೆ. ದಯವಿಟ್ಟು ನಮ್ಮ ಮನವಿಯನ್ನು ಸ್ವೀಕಾರ ಮಾಡಿ, ಸದನವನ್ನು ಮುಂದೂಡಿ ಒಂದು ಮಾತುಕತೆಗೆ ಮತ್ತೊಂದು ಅವಕಾಶವನ್ನು ತಾವು ಮಾಡಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಂರೆಡ್ಡಿ (ಬಾಗೇಪಲ್ಲಿ):– ಮಾನ್ಯ ಅಧ್ಯಕ್ಷರೆ, ಕಳೆದ ನಾಲ್ಕು ದಿವಸಗಳಿಂದ ಸದನ ಸಂಪೂರ್ಣವಾಗಿ ಸ್ಥಗಿತವಾಗಿದೆ. ಇದು ಸಾಮಾನ್ಯ ಜನರಲ್ಲಿ ಒಂದು ರೀತಿಯಾದಂಥ ಅಸಮಾಧಾನ ಮತ್ತು ಬೇಸರ ಹುಟ್ಟಿಸಿದೆ. ನಾವು ಎಲ್ಲಿ ಓಡಾಡುವಾಗ ಜನರು ಏನೇನು ಮಾತನಾಡಿ ಕೊಳ್ಳುತ್ತಾರೆಂಬುದನ್ನು ನಾವು ಕೇಳುತ್ತಿದ್ದೇವೆ. ಇವತ್ತು ರಾಜ್ಯ ಗಂಭೀರ ವಾದಂಥ ಸಮಸ್ಯೆಗಳನ್ನು ಎದುರಿಸುತ್ತಿದೆ. ಕುಡಿಯುವ ನೀರು, ಬರಗಾಲ ಮತ್ತೆ ಬರತಕ್ಕಂಥ ಸೂಚನೆಗಳು ಕಾಣಿಸುತ್ತಿವೆ. ಕೆಲಸ ಇಲ್ಲದೆ ಜನಗಳು ಊರುಗಳನ್ನು ಬಿಟ್ಟು

ಹೋಗುತ್ತಿದ್ದಾರೆ.ಇನ್ನೂ ಹಲವಾರು ಗಂಭೀರವಾದಂಥ ವಿಚಾರಗಳನ್ನು ಇಲ್ಲಿ ಚರ್ಚೆ ಮಾಡಬೇಕಾಗಿದೆ. 36 ಇಲಾಖೆಗಳ ಬೇಡಿಕೆಗಳ ಬಗ್ಗೆ ಚರ್ಚೆಯಾಗಬೇಕಾಗಿದೆ. ಸಾವಿರಾರು ಕೋಟಿ ರೂಪಾಯಿಗಳನ್ನು ಈ ಸದನ ಮಂಜೂರು ಮಾಡಬೇಕಾಗಿದೆ. ಏನೂ ಚರ್ಚೆ ಇಲ್ಲದೇ ಮಂಜೂರು ಮಾಡತಕ್ಕಂಥ ಸ್ಥಿತಿ ನಿರ್ಮಾಣವಾದರೆ ಜನ ನಮ್ಮನ್ನು ಖಂಡಿತವಾಗಿ ತಪ್ಪು ಹಿಡಿಯುತ್ತಾರೆ. ಆದರೆ ಮಾನ್ಯ ವಿರೋಧ ಪಕ್ಷದವರು ಏನು ಪ್ರಸ್ತಾಪ ಮಾಡಿದ್ದಾರೆ ಅದು ಮಾಡಬೇಕಾದಂಥ ವಿಚಾರ. ಎಕೆಂದರೆ, ಒಂದು ಸರ್ಕಾರ ನಡೆಸತಕ್ಕಂಥವರು ಬೇಜಾವಾಬ್ದಾರಿಯಿಂದ ವರ್ತನೆ ಮಾಡುವಾಗ ಆ ಬೇಜಾಬ್ದಾರಿತನವನ್ನು ಎತ್ತಿ ತೋರಿಸತಕ್ಕಂಥದ್ದು ಎಲ್ಲಾ ವಿರೋಧ ಪಕ್ಷಗಳ ಜವಾಬ್ದಾರಿ.

ಇದಕ್ಕೆ ಸರಿಯಾದಂಥ ಮತ್ತು ಸೂಕ್ತವಾದ ಉತ್ತರವನ್ನು ಸರ್ಕಾರ ದವರು ಕೊಡಬೇಕಾಗುತ್ತದೆ. ಏಕೆಂದರೆ, ಬೇಜವಾಬ್ದಾರಿ ಹೇಳಿಕೆಗಳನ್ನು ನೀಡಿ ಸರ್ಕಾರದವರೇ ಸೃಷ್ಟಿ ಮಾಡಿಕೊಂಡಿರತಕ್ಕಂಥ ಸಮಸ್ಯೆ ಇದಾಗಿದೆ. ಇದನ್ನು ಹಾಗೆಯೇ ಮುಂದುವರಿಸಿಕೊಂಡು ಹೋದರೆ, ನಮಗೆ ಮತ್ತು ಇಡೀ ಸದನಕ್ಕೆ ಘನತೆ ಮತ್ತು ಗೌರವ ತರತಕ್ಕಂಥ ವಿಚಾರವಲ್ಲ. ಆದ್ದರಿಂದ, ಇದನ್ನು ಮುಕ್ತಾಯ ಮಾಡಬೇಕು. ಮಾಡಬೇಕು. ಜನರ ಸಮಸ್ಯೆಗಳನ್ನು ನಾವು ಇಲ್ಲಿ ಚರ್ಚೆ ಮಾಡತಕ್ಕಂಥದು ನಮ್ಮ ಮೊದಲ ಆದ್ಯ ಕರ್ತವ್ಯವಾಗಿದೆ. ಪ್ರಜಾತಂತ್ರವ್ಯವಸ್ಥೆಯಲ್ಲಿ ಆಡಳಿತ ಪಕ್ಷದವರು ಅವರದೇ ಆದಂಥ ಒಂದು ರೀತಿಯ ವಾದ ಇರುತ್ತದೆ. ಹಾಗೆಯೇ ವಿರೋಧ ಪಕ್ಷದವರೂ ಕೂಡ ಒಂದು ದಾರಿ ಇರುತ್ತದೆ. ಎಲ್ಲೇ ಒಂದು ಕಡೆ ಇಬ್ಬರು ಹೊಂದಾಣಿಕೆ ಮಾಡಿಕೊಂಡು ಹೋಗದಿದ್ದರೆ ಈ ಸದನ ನಡೆಯುವುದಕ್ಕೆ ಆಗುವುದಿಲ್ಲ. ಮತ್ತು ಈ ರಾಜ್ಯದ ಹಿತದೃಷ್ಟಿಯನ್ನು ನಾವು ಕಾಪಾಡುವುದಕ್ಕೂ ಕೂಡ ಆಗುವುದಿಲ್ಲ. ಆದ್ದರಿಂದ, ಈ ಒಂದು ದೃಷ್ಟಿಯ ಹಿನ್ನೆಲೆಯಲ್ಲಿ ಮಾನ್ಯ ವಿರೋಧ ಪಕ್ಷದ ಮುಖಂಡರು ಆಗಿರತಕ್ಕಂಥ ಮಾನ್ಯ ಯಡಿಯೂರಪ್ಪ ನವರಲ್ಲಿ ವಿನಂತಿಸಿಕೊಳ್ಳುವು ದೇನೆಂದರೆ, ಈ ಸಮಸ್ಯೆಯನ್ನು ಸಾಧ್ಯವಾದಷ್ಟು ಮುಗಿಸುವುದಕ್ಕೆ ಅಥವಾ ಕೊನೆಗಾಣಿಸುವುದಕ್ಕೆ ಹಾಗೂ ಸದನ ನಡೆಸುವುದಕ್ಕೆ ತಾವು ಮನಸ್ಸು ಮಾಡಬೇಕು. ಮತ್ತೆ ಮಾತುಕತೆಗೂ ಕೂಡ ಬರಬೇಕು. ಹಾಗೆಯೇ, ಇದೇ ಸಂದರ್ಭದಲ್ಲಿ ಸರ್ಕಾದವರೂ ಕೂಡ ತಮ್ಮ ಬಿಗಿಪಟ್ಟನ್ನು ಬಿಟ್ಟು ಎಲ್ಲೊಂದು ಕಡೆ ಅವರು ಕೂಡ ಹತ್ತಿರಕ್ಕೆ ಬಂದು ರಾಜಿ ಮಾಡದೇ ಹೋದರೆ ಸಮಸ್ಯೆ ಮತ್ತೆ

ಉಲ್ಬಣವಾಗುತ್ತದೆ. ಕರ್ನಾಟಕ ರಾಜ್ಯದ ಜನತೆ ಈ ಸದನದಿಂದ ಬಹಳಷ್ಟು ನೀರಿಕ್ಷೆ ಮಾಡುತ್ತಿದ್ದಾರೆ. ಮತ್ತೆ ತಾವೂ ಕೂಡ ಬಹಳ ಪ್ರಯತ್ನಮಾಡಿ ಹೆಚ್ಚಿನ ದಿನಗಳವರೆಗೆ ಈ ಸದನ ನಡೆಯಬೇಕು ಮತ್ತು ಎಲ್ಲಾ ಇಲಾಖೆಗಳ ಬೇಡಿಕೆಗಳ ಬಗ್ಗೆ ಚರ್ಚೆಯಾಗಬೇಕೆಂಬ ಪ್ರಾಮುಖ್ಯವಾದಂಥ ಕಳಕಳಿ ಇಟ್ಟುಕೊಂಡು ನೀವು ಮತ್ತು ಮಾನ್ಯ ಕಾನೂನು ಸಚಿವರು ಹೆಚ್ಚು ದಿವಸ ಈ ಸದನ ನಡೆಯಬೇಕೆಂದು ಆಸೆ ಪಟ್ಟಿದ್ದೀರಿ. ಈಗಾಗಲೇ ಇದರಲ್ಲಿ ನಾಲ್ಕೈದು ದಿವಸ ವೇಸ್ಟ್ ಆಗಿದೆ. ಮುಂದಕ್ಕೆ ಹಾಕಿ ಮಾನ್ಯ ವಿರೋಧಪಕ್ಷದ ನಾಯಕರನ್ನು ಮತ್ತು ಸರ್ಕಾರದವರನ್ನು ಕರೆಸಿ ಇದರ ಬಗ್ಗೆ ಮಾತುಕತೆ ಮಾಡಿ ಇವತ್ತು ಏನಾದರೂ ಮಾಡಿ ಈ ಸಮಸ್ಯೆಯರನ್ನು ಬಗೆಹರಿಸಬೇಕೆಂದು ನಾನು ತಮ್ಮಲ್ಲಿ ವಿನಂತಿಮಾಡಿ ಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :- ಮಾನ್ಯ ಅಧ್ಯಕ್ಷರೆ, ವಿಷಯ ಸಮಿತಿಗಳು ಬೇಡ, ಈ ಸದನದಲ್ಲಿಯೇ ಎಲ್ಲಾ ಇಲಾಖೆಗಳ ಬೇಡಿಕೆಯ ಮೇಲೆ ಚರ್ಚೆ ಆಗಬೇಕೆಂದು ತಮ್ಮ ಅಧ್ಯಕ್ಷತೆಯಲ್ಲಿಯೇ ತೀರ್ಮಾನ ತೆಗೆದುಕೊಳ್ಳಲಾಗಿದೆ. ಈ ಒಂದು ಉದ್ದೇಶದಿಂದಲೇ ಈ ಬಾರಿ ಹೆಚ್ಚು ದಿನಗಳ ಕಾಲ ಸದನವನ್ನು ಕರೆದಿದ್ದೀರಿ. ಈಗಾಗಲೇ ನನ್ನ ಮಿತ್ರ ಹೇಳಿದ ಹಾಗೆ ಇದರಲ್ಲಿ ನಾಲ್ಕೈದು ದಿವಸ ವೇಸ್ಟ್ ಆಗಿದೆ. ಆದರೆ, ಇನ್ನು ಮುಂದೆ ಹೀಗೆಯೇ ಆದರೆ ಬೇಡಿಕೆಗಳ ಮೇಲೆ ಚರ್ಚೆಯಾಗದೆ ಬಜೆಟ್ ಪಾಸ್ ಮಾಡಿಕೊಂಡು ಹೋಗತ್ಕಂಥ ಪರಿಸ್ಥಿತಿ ನಿರ್ಮಾಣವಾಗಬಾರದು. ಇದಕ್ಕೆ ಕಾರಣ ವಿರೋಧಪಕ್ಷದ ನಾಯಕರೆಂದು ನಾನು ಸಂಪೂರ್ಣವಾಗಿ ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ, ಬೇಜವಾಬ್ದಾರಿ ಹೇಳಕೆಗಳಿಂದ ಈ ಸಮಸ್ಯೆ ಇಲ್ಲಿ ಉದ್ಭವವಾಗಿದೆ. ಎಲ್ಲೊಂದು ಕಡೆ ಸರ್ಕಾರಕ್ಕೆ ವಿರೋಧ ಪಕ್ಷದ ಆಗತ್ಯತೆ ಇಲ್ಲ ಎನ್ನತಕ್ಕಂಥ ಬಾವನೆಯನ್ನು ಅವರು ಕೊಡುತ್ತಿದ್ದಾರೆ. ಇವರಿಬ್ಬರು ಅಂದರೆ ಒಬ್ಬರ ಮೇಲೊಬ್ಬರು ಹೇಳಿಕೆಗಳನ್ನು ಕೊಡುತ್ತಿರುವುದರಿಂದ ಈ ಸಮಸ್ಯೆ ಉದ್ಭವವಾಗುತ್ತಿರುವುದು ಬಿಟ್ಟರೆ ಬೇರೆ ಯಾರಿಂದ ಕೂಡ ಉದ್ಭವವಾಗಿಲ್ಲ. ಆದ್ದರಿಂದ, ಇದನ್ನು ಹಿಡಿತಕ್ಕೆ ತರುವುದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಮಾಡಬೇಕು. In matters of conscious law of majority has no place.

ಈ ಮಾತನ್ನು ನಾನು ಹೇಳಿಲ್ಲ. ಇದನ್ನು ಮಹಾತ್ಮ ಗಾಂಧಿಯವರು ಹೇಳಿದ್ದಾರೆ. ಆದ್ದರಿಂದ, ಸರ್ಕಾರದವರಿಗೆ ಮೆಜಾರಿಟಿ ಇದೆ ಎಂಬ

ಭಾವನೆಯಿಂದ ಈ ರೀತಿ ಆಗಬಾರದು. ವಿರೋಧ ಪಕ್ಷದ ನಾಯಕರು ಹೇಳತಕ್ಕಂಥದ್ದಕ್ಕೂ ಕೂಡ ಸ್ವಲ್ಪ ಗಮನಹರಿಸಬೇಕಾಗುತ್ತದೆ. ಇವತ್ತು ಮಾನ್ಯ ರೇವಣ್ಣನವರು ಬಂದಿದ್ದಾರೆ. ಮತ್ತೆ ಮಾನ್ಯ ಅಲಂಗೂರು ಶ್ರೀನಿವಾಸರವರು ಬಂದಿದ್ದಾರೆಯೋ ಅಥವಾ ಇಲ್ಲವೋ ಎನ್ನತಕ್ಕಂಥದು ಗೊತ್ತಿಲ್ಲ. ಆದರೆ, ಅವರುಗಳು ಏನು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ ಎನ್ನತಕ್ಕಂಥದರ ಬಗ್ಗೆ ಒಂದು ಹೇಳಿಕೆ ಮಾಡಲಿ. ಆದ್ದರಿಂದ, ಸದನವನ್ನು 10 ನಿಮಿಷಗಳ ಕಾಲ ತಾವು ಮುಂದಕ್ಕೆ ಹಾಕಿ ಎಲ್ಲಾ ಕಡೆಯವರನ್ನು ತಾವು ಕರೆದು ಚರ್ಚೆ ಮಾಡಿ ಇದಕ್ಕೊಂದು ಪರಿಹಾರ ಕಂಡು ಹಿಡಿಯಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಈ ಸದನ ಬಲಾಬಲದ ಪರೀಕ್ಷೆಯ ಮತ್ತು ಕುಸ್ತಿಯ ಕಣವಾಗಬಾರದು ಎನ್ನತಕ್ಕಂಥದು ನಮ್ಮ ಉದ್ದೇಶವಾಗಿದೆ. ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕೆಂದು ನಾವು ಇಲ್ಲಿ ಕುಳಿತುಕೊಂಡಿದ್ದೇವೆ. ಮತ್ತೆ ಆಡಳಿತ ಪಕ್ಷದವರು ಮಾಡುವಂಥ ಕಾರ್ಯದಲ್ಲಿ ಇರುವಂಥ ಲೋಪದೋಷಗಳನ್ನು ಎತ್ತಿ ಹಿಡಿದು, ಈ ರಾಜ್ಯದ ಹಿತದೃಷ್ಟಿಯಿಂದ ಅದಕ್ಕೊಂದು ಪರಿಹಾರ ಹುಡುಕಬೇಕೆಂಬ ಉದ್ದೇಶದಿಂದ ಪ್ರತಿಪಕ್ಷದವರಾದ ನಾವು ಇಲ್ಲಿ ಕುಳಿತುಕೊಂಡಿದ್ದೇವೆ. ಮತ್ತೆ ಇದಕ್ಕೆ ಪ್ರಜಾತಂತ್ರ ವ್ಯವಸ್ಥೆಯೆಂದು ಕರೆಯುತ್ತೇವೆ. ಆಡಳಿತ ಪಕ್ಷದವರಿಗೆ ಬಹಳಷ್ಟು ಜವಾಬ್ದಾರಿ ಇರುತ್ತದೆ. ಅದಕ್ಕಿಂತ ಹೆಚ್ಚಿನ ಜವಾಬ್ದಾರಿ ವಿರೋಧಪಕ್ಷದವರಿಗೂ ಕೂಡ ಇರುತ್ತದೆ. ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವತ್ತಿನದಿವಸ ನೀವು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿ ಕೊಂಡಿದ್ದೀರಿ ಎನ್ನತಕ್ಕಂಥದು ನಮಗೆ ಅರ್ಥವಾಗುತ್ತದೆ. ಮತ್ತೆ ನಮ್ಮ ದುಃಖ ಏನೆಂದರೆ, ಪ್ರತಿನಿತ್ಯ ಒಬ್ಬೊಬ್ಬ ಸಚಿವರು ಒಂದೊಂದು ಹೇಳಿಕೆಯನ್ನು ಕೊಟ್ಟರೆ ಹೇಗೆ? ಸಚಿವರಾಗತಕ್ಕಂಥ ಸಮಯದಲ್ಲಿ ಗೌಪ್ಯವಾದ ಪ್ರಮಾಣ ವಚನ ಏನು ತೆಗೆದುಕೊಂಡಿರುತ್ತಾರೆಂದರೆ, ಇಂಥ ಹೆಸರಿನವನಾದ ನಾನು ಕರ್ನಾಟಕ ರಾಜ್ಯದ ಮಂತ್ರಿಯಾಗಿ ನನ್ನ ಪರ್ಯಾಲೋಚನೆಗೆ ಬರತಕ್ಕಂಥ ಅಥವಾ ತಿಳಿದು ಬರತಕ್ಕಂಥ ಯಾವುದೇ ವಿಷಯವನ್ನು ಮತ್ತು ನನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲು ಅಗತ್ಯ ಆಗಿರತಕ್ಕಂಥ ಸಂದರ್ಭ ಅಲ್ಲದ ಅನ್ಯಥಾ ಯಾವುದೇ

ವ್ಯಕ್ತಿಗಾಗಲಿ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ತಿಳಿಸುವುದಕ್ಕೆ ಅಥವಾ ಪ್ರಕಟಿಸುವುದಿಲ್ಲವೆಂದು ಗೌಪ್ಯ ಪ್ರಮಾಣ ವಚನ ಸ್ವೀಕಾರ ಮಾಡಿರುತ್ತಾರೆ. ಆದರೆ, ಪ್ರತಿನಿತ್ಯ ಒಬ್ಬೊಬ್ಬ ಮಂತ್ರಿ ಪರಸ್ಪರ ಆರೋಪ, ಪ್ರತ್ಯಾರೋಪದಲ್ಲಿ ತೊಡಗಿದ್ದಾರೆ. ಈ ರೀತಿಯಾಗಿ ವಿರೋಧ ಪಕ್ಷದವರಾದ ನಾವು ಹೇಗೆ ಕೆಲಸ ಮಾಡಬೇಕು? ಆದ್ದರಿಂದ ಪಕ್ಷದ ಮುಖಂಡರನ್ನು ಕರೆದು ಚರ್ಚೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಸದನದ ಕಾರ್ಯಕಲಾಪಗಳು ನಡೆಯಬೇಕು ಎನ್ನುತಕ್ಕಂಥದು ನಮ್ಮ ಆದ್ಯ ಕರ್ತವ್ಯವಾಗಿದೆ. ಮೂರು ದಿವಸಗಳಲ್ಲಿ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಯಾವುದೇ ರೀತಿಯಾದ ತನಿಖೆಯನ್ನು ಮಾಡಿಸಿ ಎಂದು ನಾವು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿದ್ದೇವೆ. ಇದಕ್ಕೂ ಕೂಡ ನಾವು ಪಟ್ಟು ಹಿಡಿದಿಲ್ಲ. ಇವತ್ತಿನದಿವಸ ಮಾನ್ಯ ಸಚಿವರಾಗಿರತಕ್ಕಂಥ ಆಲಂಗೂರು ಶ್ರೀನಿವಾಸರವರು ಬಂದಿದ್ದರೆ ಈ ಸದನದಲ್ಲಿ ಒಂದು ಹೇಳಿಕೆಯನ್ನು ಅವರಿಂದ ಕೊಡಿಸಿ. ಮತ್ತೆ ಹೊರದೇಶಕ್ಕೆ ಹೋಗಿದ್ದಂಥ ಮಾನ್ಯ ರೇವಣ್ಣನವರು ಕೂಡ ಇವತ್ತು ಬಂದಿದ್ದಾರೆ. ಅವರೂ ಕೂಡ ಒಂದು ಹೇಳಿಕೆ ಕೊಡಲಿ. ಇದರ ಬಗ್ಗೆ ಯಾವ ರೀತಿಯಾದ ತನಿಖೆ ಮಾಡಬೇಕೆಂಬುದು ಮಾನ್ಯ ಮುಖ್ಯಮಂತ್ರಿಯವರಿಗೆ ಬಿಟ್ಟಿರತಕ್ಕಂಥ ವಿಚಾರವಾಗಿದೆ. ಆದರೆ, ಸತ್ಯ ಹೊರಕ್ಕೆ ಬರಬೇಕು. ಮತ್ತೆ ಯಾರಿಂದಲೂ ಕೂಡ ನಾವು ರಾಜೀನಾಮೆ ಯನ್ನು ಕೇಳಿಲ್ಲ. ಆದರೆ, ಪರಸ್ಪರ ಹಗರಣಗಳು ಬಯಲಿಗೆ ಬರಬೇಕು ಎನ್ನತಕ್ಕಂಥದನ್ನು ನಾವು ಕೇಳಿದ್ದೇವೆ. ನಿಮ್ಮ ಸಚಿವರು ಹಗರಣಗಳು ಬಯಲಿಗೆ ಬರಬೇಕು ಎನ್ನತಕ್ಕಂಥದನ್ನು ನಾವು ಕೇಳಿದ್ದೇವೆ. ನಿಮ್ಮ ಸಚಿವರು ಮನಸ್ಸಿಗೆ ಬಂದಂತೆ ಹೇಳಿಕೆ ಕೊಡತಕ್ಕಂಥದನ್ನು ನಿಲ್ಲಿಸಬೇಕು. ಜನಪರ ಕಾಳಜಿಯರನ್ನು ನಾವು ನೀವು ವಹಿಸಿಕೊಂಡು ಕೆಲಸ ಮಾಡಬೇಕಾಗುತ್ತದೆ. ಇದು ಬಿಟ್ಟು ಬೇರೆ ಉದ್ದೇಶ ನಮ್ಮದು ಇಲ್ಲ. ನಾವು ಹೇಳಿರತಕ್ಕಂಥದರಲ್ಲಿ ತಪ್ಪು ಅಥವಾ ಸರಿಯಿಲ್ಲವೆಂದರೆ ನಮ್ಮನ್ನು ಹೊರಕ್ಕೆ ಹಾಕಿ. ಕಾರ್ಯಕಲಾಪಗಳು ನಡೆಯುವುದಕ್ಕೆ ನಮ್ಮದೇನು ಅಭ್ಯಂತರವಿಲ್ಲ. ನಮ್ಮಿಂದ ಈ ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆಯಾಗಲಿಲ್ಲವೆಂದು ಆಗಬಾರದು. ಅದೇ ರೀತಿಯಾಗಿ ಪ್ರತಿಪಕ್ಷಗಳು ಇಲ್ಲಿ ಇದ್ದುಕೊಂಡು ಈ ಎಲ್ಲಾ ಹಗರಣಗಳು ಆಗಿದ್ದರೂ ಕೂಡ ಅವರು ಕೈ ಕಟ್ಟಿಕೊಂಡು ಕುಳಿತುಕೊಂಡಿದ್ದಾರೆ ಎನ್ನತಕ್ಕಂಥ ಆರೋಪವನ್ನು ಹೊರುವುದಕ್ಕೂ ನಾವು ಸಿದ್ಧರಿಲ್ಲ. ಇದಕ್ಕೆ ನಿಮ್ಮ ಪತ್ರ ಬಹಳ

ದೊಡ್ಡದಿದೆ. ದಯಮಾಡಿ ಕುಳಿತು ಇದರ ಬಗ್ಗೆ ಚರ್ಚೆ ಮಾಡಿ. ಮಾನ್ಯ ರೇವಣ್ಣನವರು ಬಂದ ಮೇಲೆ ಅವ ರಿಂದ ಇದರ ಬಗ್ಗೆ ಹೇಳಿಕೆ ಕೊಡಿಸುತ್ತೇನೆಂದು ಮತ್ತು ಇದರ ಬಗ್ಗೆ ಯಾವ ರೀತಿಯ ತನಿಖೆ ಆಗಬೇಕೆಂಬುದರ ಬಗ್ಗೆ ನೋಡುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಯವರ ವಿವೇಚನೆಗೆ ಬಿಡುತ್ತೇನೆ. ದಯಮಾಡಿ ಈ ಸಮಸ್ಯೆಯನ್ನು ಬೇಗ ಬಗೆಹರಿಸಿ ಉಳಿದಿರತಕ್ಕಂಥ ಈ ರಾಜ್ಯದ ಜ್ವಲಂತ ಸಮಸ್ಯೆ ಬಗ್ಗೆ ಚರ್ಚೆ ಮಾಡೋಣ ಎನ್ನತಕ್ಕಂಥ ಸಲಹೆಯನ್ನು ನಾನು ಕೊಡುತ್ತೇನೆ. ಮತ್ತೆ ಕಾರ್ಯಕಲಾಪಗಳು ನಡೆಯಬೇಕೆಂಬುದರ ಬಗ್ಗೆ ನಾವೂ ಕೂಡ ಬದ್ಧರಾಗಿದ್ದೇವೆ. ಮೂರು ದಿವಸಗಳಿಂದ ಈ ಕಾರ್ಯಕಲಾಪಗಳು ನಡೆ ಯದೇ ಇರುವುದಕ್ಕೆ ನಾವು ಕಾರಣವಲ್ಲ. ಇವತ್ತಿನ ದಿವಸ ಆಡಳಿತ ಪಕ್ಷದ ಜವಾಬ್ದಾರಿ ಬಹಳ ದೊಡ್ಡದಿದೆ. ಇದಕ್ಕೆ ಅವರೇ ಜವಾಬ್ದಾರಿ ಹೊರಬೇಕೇ ವಿನಃ ನಾವಲ್ಲ. ಒಟ್ಟಿನಲ್ಲಿ ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ.

ಶ್ರೀ ಎಚ್. ಕೆ. ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆ ಸಚಿವರು) :– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್ ರವರು ಮತ್ತು ಮಾನ್ಯ ಶ್ರೀರಾಮರೆಡ್ಡಿಯವರ ಹಾಗೂ ಮಾನ್ಯ ಮಾಧುಸ್ವಾಮಿ ಯವರು, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಈಗಾಗಲೇ ಮಾತನಾಡಿದ್ದು, ವಿವರವಾದ ತಮ್ಮ ಭಾವನೆಗಳನ್ನು ಹಾಗೂ ವಿನಂತಿಯನ್ನು ಕೂಡ ಮಾಡಿದ್ದಾರೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಸಹಿತ ಕೆಲವು ವಿಚಾರಗಳನ್ನು ನಮ್ಮ ಜೊತೆಗೆ ಹಂಚಿಕೆ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ತಾವೂ ಕೂಡ ಗಮನಿಸುತ್ತಿದ್ದೀರಿ. ಕೆಲವು ದಿವಸಗಳಿಂದ ನಮ್ಮ ಸದನ ನಡೆಯುವುದಕ್ಕೆ ಸಾಧ್ಯವಾಗಿಲ್ಲ. ಅತ್ಯಂತ ಮಹತ್ವದ ವಿಚಾರಗಳ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಬೇಕಾಗಿದೆ. ಇದು ರೈತರ ಅಥವಾ ಬಡವರ ಅಥವಾ ಹಲವಾರು ಬೆಲೆಗಳ ಬಗ್ಗೆ ಇರಬಹುದು. ಇವತ್ತಿನ ದಿವಸ ಬಹಳಷ್ಟು ಮಹತ್ವವಾದ ವಿಚಾರಗಳು ಈ ಸದನದ ಎದುರಿಗೆ ಇರುವಾಗ ನಾವು ಸಮಯವನ್ನು ಹಾಳು ಮಾಡಿದರೆ ಜನರ ಆಕ್ರೋಶಕ್ಕೆ ಬಲಿಯಾಗುತ್ತೇವೆ ಎನ್ನತಕ್ಕಂಥದನ್ನು ಈ ಸದನದಲ್ಲಿರತಕ್ಕಂಥ ನಾವೆಲ್ಲರೂ ಅರ್ಥೈಸಿಕೊಳ್ಳ ಬೇಕಾಗುತ್ತದೆ. ಆ ಒಂದು ಹಿನ್ನೆಲೆಯಲ್ಲಿ ಯಾವುದೇ ರೀತಿಯಾದ ವಿಚಾರ ಇದ್ದರೂ ಕೂಡ ಮಾತನಾಡಿ ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮತ್ತು ಸಂಸತ್ತಿನ ವ್ಯವಸ್ಥೆಯಲ್ಲಿ ನಾವು

ಗೌರವವನ್ನು ಇಟ್ಟು ಈ ಸದನದ ಘನತೆ, ಗೌರವವನ್ನು ಎತ್ತಿ ಹಿಡಿಯ ಬೇಕೆಂಬ ದೃಷ್ಟಿಯಿಂದ ಇವತ್ತು ಮಾನ್ಯ ವಾಟಾಳ್‌ನಾಗರಾಜ್‌ರವರು, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಮತ್ತು ಮಾನ್ಯ ಮಾಧುಸ್ವಾಮಿಯವರು ಹಾಗೂ ಮಾನ್ಯ ಶ್ರೀರಾಮರೆಡ್ಡಿಯವರು ಒಳ್ಳೆಯ ಸಲಹೆ ಮಾಡಿದ್ದಾರೆ. ಆ ಸಲಹೆ ಪ್ರಕಾರ ತಾವು ಕೆಲವು ಸಮಯ ಸದನವನ್ನು ಅಡ್ಜರ್ನ್ ಮಾಡುವುದಾದರೆ ಮಾಡಿ. ಸರ್ಕಾರ ಇದರ ಬಗ್ಗೆ ಯಾವುದೇ ರೀತಿಯ ರಿಸರ್ವೇಶನ್ ಇಲ್ಲದೆ ಮಾತನಾಡುವುದಕ್ಕೆ ಒಪ್ಪಿಕೊಳ್ಳುತ್ತದೆ. ಆದರೆ, ಇದೂ ಸಹ ಅವಶ್ಯಕತೆ ಇಲ್ಲವೆಂದು ನಾನು ಭಾವಿಸಿದ್ದೇನೆ. ಈಗ ಪ್ರಶ್ನೋತ್ತರ ಪ್ರಾರಂಭ ಮಾಡೋಣ. ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ತಾವು ಚರ್ಚೆಗೆ ಕರೆದರೆ ನಾವು ಸಿದ್ಧರಿದ್ದೇವೆ. ಇದನ್ನು ತಮ್ಮ ವಿವೇಚನೆಗೆ ಬಿಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :– ಈಗ ಪ್ರಶ್ನೋತ್ತರ ಬೇಡ. ದಯ ಮಾಡಿ...

ಶ್ರೀ ಎಸ್. ಧರ್ಮಸಿಂಗ್ (ಮುಖ್ಯಮಂತ್ರಿ) :– ಸನ್ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದ ನಾಯಕರು ಪದೇ ಪದೇ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಇವತ್ತಿನದಿವಸ ಪ್ರತಿಯೊಂದು ಇಲಾಖೆಯಲ್ಲಿ ನಡೆಯತಕ್ಕಂಥ ಆರೋಪ ಏನಿದೆ, ಇದರ ಬಗ್ಗೆ ತನಿಖೆ ನಡೆಸತಕ್ಕಂಥದರ ಬಗ್ಗೆ ಸರ್ಕಾರ ಇವತ್ತಿನ ದಿವಸ ನೋಡಿಯೇ ಆಡಳಿತ ನಡೆಸುತ್ತಿದೆ. ಇವತ್ತು ಸದನ ನಡೆಸತಕ್ಕಂತ ರೀತಿಯಲ್ಲಿ ವಿರೋದಪಕ್ಷದ ನಾಯಕರು ಪ್ರಸ್ತಾಪ ಮಾಡಿದ ಮೇಲೆ ನನಗೆ ಏನು ಅನಿಸುತ್ತಿದೆ ಎಂದರೆ ನಾವು ಎಲ್ಲಿ ಎಡವಿದ್ದೇವೆಯೋ ಎಂಬುದು ಗೊತ್ತಾಗುತ್ತಿಲ್ಲ. ತಾವು ಪ್ರಸ್ತಾಪ ಮಾಡಿದ್ದೀರಿ ಮತ್ತೆ ನಾನು ಈ ರಾಜ್ಯದ ಮುಖ್ಯಮಂತ್ರಿಯಾಗಿ ಹೇಳಿದ್ದೇನೆ. ಸಂಬಂಧಪಟ್ಟ ಮಂತ್ರಿಗಳು ಬಂದಿದ್ದಾರೆ. ಮತ್ತೆ ಅವರು ಆ ತರಹದ ಹೇಳಿಕೆ ಕೊಟ್ಟಿಲ್ಲವೆಂದು ಹೇಳಿದ ಮೇಲೆ ಅದು ಮುಗಿಯಬೇಕು. ಮತ್ತೆ ನೀವು ಪ್ರತಿಯೊಂದು ಹಂತದಲ್ಲಿಯೂ ಕೂಡ ಸಭೆ ನಡೆಸುವುದಕ್ಕೆ ಅಡ್ಡಿಪಡಿಸುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಿದ್ದೀರಿ. ಆದರೆ, ಕಳೆದ ಮೂರು ದಿವಸಗಳಿಂದ ಕಾರ್ಯಕಲಾಪಗಳು ನಡೆದಿಲ್ಲ. ಇವತ್ತು ಇಡೀ ರಾಜ್ಯದ ಜನತೆ ಯಾರದು ಏನು ಎನ್ನತಕ್ಕಂಥದನ್ನು ಪ್ರತಿನಿತ್ಯ ನೋಡುತ್ತಿದ್ದಾರೆ. ನಾವು ಎಲ್ಲಿ ಎಡವಿದ್ದೇವೆಂದು ಹೇಳಿದ್ದೇವೆ. ಮತ್ತೆ ಅವರೂ ಕೂಡ ಬಂದಿದ್ದಾರೆ. ಆದರೆ, ಇಲ್ಲಿ ಏನಾಗುತ್ತದೆಂದರೆ, ಈ ತರಹದ ಹಠಮಾರಿತನ ಮಾಡತಕ್ಕಂಥ ರೀತಿಯಲ್ಲಿ ಇವೆಲ್ಲ ನಡೆದಿದೆ. ಇದು ಎಲ್ಲಾ ಕಡೆ

ಅಂದರೆ ಲೋಕಸಭೆಯಲ್ಲಿ ಮತ್ತು ಇಲ್ಲಿಯೂ ಕೂಡ ನಡೆಯುತ್ತಿದೆ. ಆದರೆ ಇದರ ಪರಿಣಾಮ ಏನು ಕೂಡ ಆಗುವುದಿಲ್ಲ ಮತ್ತೆ ಮೈಲೇಜ್ ಯಾರಿಗೂ ಕೂಡ ಸಿಗುವುದಿಲ್ಲ. ಈಗ ನಾನು ಹೇಳತಕ್ಕಂಥದು ಏನೆಂದರೆ, ಇಲ್ಲಿ ಸಮ್ಮಿಶ್ರ ಸರ್ಕಾರ ಇದ್ದು, ನಾವೆಲ್ಲರೂ ಕೂಡ ಹೇಳಿದ ಹಾಗೆ ಮಾನ್ಯ ಶಿವರಾಂರವರನ್ನು ಕರೆಸಿದ್ದೇವೆ. ಅವರು ಕೂಡ ಉತ್ತರ ಕೊಟ್ಟಿದ್ದಾರೆ. ಮತ್ತೆ ನಾನು ಹೇಳಿಲ್ಲ ಎನ್ನತಕ್ಕಂಥದಷ್ಟೇ ಸಾಕು. ಆದರೆ, ತಾವು ಏಕೆ ಪದೇ ಪದೇ ಎಳೆದುಕೊಂಡು ಹೋಗುತ್ತಿದ್ದೀರಿ ? ಎಲ್ಲಿ ಏನು ಸಮಸ್ಯೆ ಇದೆ ?ಒಂದು ಇಲಾಖೆ ಬಗ್ಗೆ ತನಿಖೆ ಆಗಬೇಕೆಂದು ತಾವು ಹೇಳುತ್ತಿದ್ದೀರಿ. ಎಷ್ಟು ತನಿಖೆ ಆಗಬೇಕು. ಈಗಾಗಲೇ ನಾವು ಎಲ್ಲಾ ತನಿಖೆಗಳನ್ನು ಮಾಡುತ್ತಿದ್ದೇವೆ. ಎಲ್ಲಾ ಇಲಾಖೆಗಳಲ್ಲಿ ಏನೇನು ವ್ಯವಹಾರ ನಡೆಯುತ್ತಿವೆ ಎನ್ನುತಕ್ಕಂಥದು ಸರ್ಕಾರ ಮತ್ತು ಮುಖ್ಯಮಂತ್ರಿಗಳ ಗಮನಕ್ಕೆ ಇಲ್ಲ. ಇದು ಸರ್ಕಾರದ ಗಮನಕ್ಕೆ ಇಲ್ಲವೆ? ಮುಖ್ಯ ಮಂತ್ರಿಗಳ ಗಮನಕ್ಕೆ ಇಲ್ಲವೆ? ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ಇಲ್ಲವೆ? ತಾವು ಹೇಳಿರುವುದಕ್ಕೆ ನಾವು ಸ್ಪಂದಿಸಿಲ್ಲವೆ? ಎಲ್ಲಾ ಇದೆ. ಆದರೆ ಈ ತರಹದ ಧೋರಣೆ ಮತ್ತೆ ಕೂಡ ಸೋಮವಾರ ದಿವಸ ಸದನ ಪ್ರಾರಂಭವಾಗ ತ್ಕಂಥದ್ದು ಅದೇ ಹಾಡು, ಅದೇ ರೀತಿಯಾಗಿ ಹೇಳತಕ್ಕಂಥದ್ದು ನನಗನಿಸುತ್ತಿಲ್ಲ. ವಿರೋಧ ಪಕ್ಷದ ಸ್ಥಾನದಲ್ಲಿ ಮೊಟ್ಟಮೊದಲನೆಯದಾಗಿ ಕರ್ನಾಟಕ ರಾಜ್ಯದಲ್ಲಿ 79 ಜನ ಸದಸ್ಯರಿಗೆ ತಾವು ನಾಯಕರಾಗಿದ್ದೀರಿ. ನಾಯಕರಾದ ಮೇಲೆ ಪ್ರತಿಯೊಂದು ವಿಷಯಗಳನ್ನು ಎತ್ತತಕ್ಕಂಥ ರೀತಿಯಲ್ಲಿ ಅದನ್ನು ಎಚ್ಚರಿಕೆಯಿಂದ ಪ್ರತಿಪಾದನೆ ಮಾಡಬೇಕು. ಆದರೆ ಪರಿಣಾಮ ಏನು ಆಗುತ್ತದೆ, ಅದು ನಿಮಗೆ ಬಿಟ್ಟದ್ದು ನಮಗೇನು ಇಲ್ಲ. ನಾವೇನು ಸ್ಪಂದಿಸಿಲ್ಲ, ಏನು ಹೇಳಿಲ್ಲ, ಮಾನ್ಯ ಸಭಾಧ್ಯಕ್ಷರು ಕೂಡ ಪ್ರತಿಯೊಂದರಲ್ಲಿ ಹೇಳಿದ್ದಾರೆ. ಇವತ್ತು ಮಾನ್ಯ ವಾಟಾಳ್ ನಾಗರಾಜ್‌ರವರು, ಮಾಧುಸ್ವಾಮಿಯವರು, ಜಯಪ್ರಕಾಶ ಹೆಗಡೆಯವರು ಎಲ್ಲರೂ ಕೂಡ ಏನು ಹೇಳುತ್ತಿದ್ದಾರೆಂದರೆ, ಎಲ್ಲರೂ ಕೂಡ ಸದನದ ಸಭೆ ನಡೆಯಲಿ ಎನ್ನತಕ್ಕಂಥ ಭಾವನೆ ಇದೆ. ಸಾಕಷ್ಟು ಚರ್ಚೆಗಳಾಗುತ್ತಿವೆ, ಇವತ್ತು ನೀವು ಹೇಳಿದಿರಿ, 5ನೇ ಅಗಸ್ಟ್ 2005ರ ವರೆಗೆ ಸದನ ನಡೆಯುವಂತೆ ತಾವು ನಿರ್ಣಯವನ್ನು ತೆಗೆದುಕೊಂಡಿರುತ್ತೀರಿ ಅದಕ್ಕೆ ನಾವು ತಲೆ ಬಾಗಿರುತ್ತೇವೆ. ಆದರೆ ಸದನ ಸೇರಿ 11 ದಿವಸವಾಯಿತು. ಏನು ಕಾರ್ಯ ಕಲಾಪಗಳು ಆಗಿವೆ. ನನಗೆ ಅರ್ಥವಾಗುತ್ತಿಲ್ಲ, ನಾವು ಸುಮ್ಮನೆ ಕುಳಿತಿದ್ದೇವೆ, ಅವರಿಗೆ ಬಹಳತಾಪತ್ರಯ ಇದೆ ಎಂದು ಹೇಳಿದಿರಿ. ತಾಪತ್ರಯವನ್ನು ಇಟ್ಟು ಕೊಂಡು

ಕೆಲಸ ಮಾಡತಕ್ಕಂಥ ಮುಖ್ಯಮಂತ್ರಿ ನಾನು ಅಲ್ಲ. ಸಮಾನವಾಗಿ ನ್ಯಾಯ ಕೊಡತಕ್ಕಂಥ ಮುಖ್ಯಮಂತ್ರಿಯಾಗಿದ್ದೇನೆ. ನ್ಯಾಯ ಕೊಡತಕ್ಕಂಥ ಮುಖ್ಯಮಂತ್ರಿಯಾದ ಮೇಲೆ, ಮಾನ್ಯ ಶಿವರಾಂ ರವರು ಎಲ್ಲಿಯಾದರೂ ಹೇಳಿಕೆ ಕೊಡುತ್ತಿರುವಂಥ ರೀತಿಯ ಬಗ್ಗೆ ಅವರಿಂದ ದೂರವಾಣಿ ಮೂಲಕ ನಾನು ಆದೇಶವನ್ನು ತೆಗೆದುಕೊಂಡಿದ್ದೇನೆ. ಅದು ನಮ್ಮ ನಿರ್ಣಯ, ಸಂಪುಟದ ನಿರ್ಣಯ ಅವರು ಹೇಳಿದ್ದಾರೆ, ಕೊಟ್ಟಿದ್ದಾರೆ. ನೀವು ಸುಮ್ಮನೆ ವಿನಾಕಾರಣವಾಗಿ ಈ ತರಹ ಮಾಡಿದರೆ ದೇಶದ ಜನರಿಗೆ ಗೊತ್ತಿದೆ ಏಕಪ್ಪಾ ನಾವು 79 ಜನರನ್ನು ಹೌಸ್‌ಗೆ ಕಳುಹಿಸಿದೆವು ಎಂದಾಗುತ್ತದೆ.

(ಗೊಂದಲ)

ಅದಕ್ಕಾಗಿ ನಾವು ಒಂದಾಗಿದ್ದೇವೆ. ನಿಮ್ಮ ಎಲ್ಲಾ ಶಕ್ತಿಗಳನ್ನು ಬದಿಗಿಡತಕ್ಕಂಥ ರೀತಿಯಲ್ಲಿ Secular forces have united in the state.

(ಗೊಂದಲ)

ನಾನು ನಿಮಗೆ ಈ ರೀತಿಯ ರಾಜಕಾರಣವನ್ನು ಮಾಡುವುದಕ್ಕೆ ಬಿಡುವುದಿಲ್ಲ. ಹಾಗೆ ಮಾಡಬೇಕೆಂದರೆ ಸಾಕಷ್ಟು ಉದಾಹರಣೆಗಳನ್ನು ನಾನು ಹೇಳುತ್ತೇನೆ. ಲೋಕಸಭೆಯಲ್ಲಿ ಏನಾಯಿತು. ಬೇರೆ ರಾಜ್ಯಗಳಲ್ಲಿ ಏನು ನಡೆಯುತ್ತಿದೆ. ಅದೆಲ್ಲವನ್ನು ಪ್ರಸ್ತಾಪ ಮಾಡಿದರೆ ಸಾಕಾಗುವುದಿಲ್ಲ. ಇದನ್ನು ಇಷ್ಟಕ್ಕೆ ಬಿಡಬೇಕು. ಅವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಸದನದ ಕಾರ್ಯಕಲಾಪಗಳು ನಡೆಯಬೇಕು. ಮತ್ತೆ ಎಲ್ಲರೂ ಸಭೆಯಲ್ಲಿ ಕೂಡತಕ್ಕಂಥದ್ದು ಅವಶ್ಯಕತೆ ಇಲ್ಲವೆಂದು ನನ್ನ ಭಾವನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಕಾರ್ಯ ಕಲಾಪ ಸಸೂತ್ರವಾಗಿ ನಡೆಯಬೇಕೆನ್ನುವ ಅಪೇಕ್ಷೆ ಇಲ್ಲದಿದ್ದರೆ ನನ್ನದೇನು ಅಭ್ಯಂತರವಿಲ್ಲ. ನಾನು ಎಂದು ರಾಜಕಾರಣ ಮಾಡಿಲ್ಲ. ಅವರು ಹೇಳಿದ ಹಾಗೆ, ಮಾನ್ಯ ಮುಖ್ಯಮಂತ್ರಿಗಳು ಒಂದು ನಿಮಿಷ, ನಾನು ನಿಮ್ಮ ಮಾತನ್ನು ಕೇಳಿದ್ದೇನೆ. 79 ಜನರನ್ನು ಯಾಕಾದರೂ ಆಯ್ಕೆ ಮಾಡಿ ಕಳುಹಿಸಿದ್ದೇವೆಂದು ಯೋಚನೆ ಮಾಡುತ್ತಿದ್ದಾರೋ ಅಥವಾ 130 ಜನ ಸದಸ್ಯರು ಇರುವುದನ್ನು 64 ಏಕಾಯಿತು ಎಂದು ನೀವು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಕಾಲವಿದು. ಆದ್ದರಿಂದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮ ಮಾಲೀಕರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ಅದಕ್ಕೆ ನಾವು ತಲೆಬಾಗೋಣ. ನಿಮ್ಮ ಸಮ್ಮಿಶ್ರ ಸರ್ಕಾರ

ಇದೆ, ಸಮ್ಮಿಶ್ರ ಸರ್ಕಾರದ ಪಾರ್ಟ್ನರ್ಸ್‌ಗಳೆ ಬೆಳಿಗ್ಗೆ ಎದ್ದು ಆರೋಪ ಮತ್ತು ಪ್ರತ್ಯಾರೋಪದಲ್ಲಿ ತೊಡಗಿದರೆ ಹೇಗೆ ಎಂದು ನಾನು ನಿಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ. ಎನ್. ಧರ್ಮಸಿಂಗ್ :– ಕೇಂದ್ರದಲ್ಲಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನ ಮಂತ್ರಿಗಳಾದಾಗ ಎಷ್ಟು ಪಕ್ಷದವರನ್ನು ತಾವು ತೆಗೆದುಕೊಂಡಿದ್ದೀರಿ ? ಯಾವ ರೀತಿಯಾಗಿ ಎನ್‌ಡಿಎ ಗೌರ್ನಮೆಂಟ್ ಇತ್ತು. ಅದೇ ರೀತಿ ಕೇಂದ್ರದಲ್ಲಿಯೂ ಇದೆ, ಇಲ್ಲಿಯೂ ಇದೆ. ಪ್ರಸ್ತುತ ರಾಜಕೀಯ ಸನ್ನಿವೇಶದಲ್ಲಿ, we have taken a correct decision in the Karnataka state.

ಶ್ರೀ ಬಿ.ಎಸ್. ಯಡಿಯೂರಪ್ಪ :– ನಮ್ಮ ವಿರೋಧವಿಲ್ಲ. ನೀವು ಸಮ್ಮಿಶ್ರ ಸರ್ಕಾರ ಏಕೆ ಮಾಡಿದಿರಿ ಎನ್ನುವುದರ ಬಗ್ಗೆ ನಾವು ವಿರೋಧ ಮಾಡುತ್ತಿಲ್ಲ. ಸಮ್ಮಿಶ್ರ ಸರ್ಕಾರ ಮಾಡಿದ ಮೇಲೆ ಗೌರಯುತವಾಗಿ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಆಡಳಿತ ನಡೆಸಿ ಎನ್ನುವ ಮಾತನ್ನು ಹೇಳುತ್ತಿದ್ದೇವೆ ಹೊರತು, ವಿರೋಧ ಪಕ್ಷವಾಗಿ ಇವತ್ತು ನಾವು ನಮ್ಮ ಕರ್ತವ್ಯವನ್ನು ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ದಯವಿಟ್ಟು 10 ನಿಮಿಷ ಸದನವನ್ನು ಮುಂದಕ್ಕೆ ಹಾಕಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :– ಕಾರ್ಯಕಲಾಪಗಳು ನಡೆಯಬಾರ ದೆಂದು ಅಡ್ಡಿ ಮಾಡುತ್ತೀರುವವರು ಮಾನ್ಯ ಮುಖ್ಯಮಂತ್ರಿಗಳೆ ಹೊರತು ನಾವಲ್ಲ.

ಅಧ್ಯಕ್ಷರು :– ಸದನವನ್ನು 10 ನಿಮಿಷ ಮುಂದೂಡುತ್ತಿದ್ದೇನೆ.

(ಸದನವನ್ನು 11 ಗಂಟೆ 33 ನಿಮಿಷದಿಂದ 10 ನಿಮಿಷಗಳ ಕಾಲ ಮುಂದೂಡಲಾಯಿತು.)

(ಸದನವು ಪುನಃ ಮಧ್ಯಾಹ್ನ 1.15 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು.)

(ಭಾರತೀಯ ಜನತಾ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು.)

ಅಧ್ಯಕ್ಷರು :– ಮಾನ್ಯ ರೇವಣ್ಣನವರೆ, ತಮ್ಮ ಸ್ಟೇಟ್‌ಮೆಂಟ್ ಮಾಡಿ.

ಶ್ರೀ ಬಸವರಾಜ ರಾಯರೆಡ್ಡಿ :– ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುವುದರಿಂದ, ಧರಣಿ ನಿರತ ಮಾನ್ಯ ಸದಸ್ಯರು ಸದನದ ಬಾವಿಯಿಂದ ನಿರ್ಗಮಿಸಬಹುದು.

ಶ್ರೀ. ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) (ತಮ್ಮ ಸ್ಥಾನದಿಂದ):– ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾರೆ. ಆಮೇಲೆ ಏನಾಗುತ್ತದೋ ನೋಡೋಣ. ದಯವಿಟ್ಟು ಎಲ್ಲಾ ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿ.

ಅಧ್ಯಕ್ಷರು :– ಈಗ ಮಾನ್ಯ ಕಾಮಗಾರಿ ಇಲಾಖಾ ಸಚಿವರು ತಮ್ಮ ಸ್ಟೇಟ್‌ಮೆಂಟ್ ನೀಡುತ್ತಾರೆ. ದಯಮಾಡಿ ಎಲ್ಲಾ ಸದಸ್ಯರೂ ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಬೇಕು.

(ಧರಣಿ ನಿರತ ಭಾರತೀಯ ಜನತಾ ಪಕ್ಷದ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿದರು.)

ಮಂತ್ರಿಗಳ ಹೇಳಿಕೆ

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):– ಸನ್ಮಾನ್ಯ ಸಭಾ ಅಧ್ಯಕ್ಷರೆ,

ಹಾಸನ ಜಿಲ್ಲೆಗೆ ಸಂಬಂಧಪಟ್ಟಂತೆ ಲೋಕೋಪಯೋಗಿ ಮತ್ತು ಇಂಧನ ಇಲಾಖೆಗಳ ಕಾರ್ಯವೈಖರಿ ಬಗ್ಗೆ ವಿಧಾನ ಸಭೆಯಲ್ಲಿ ಮಾನ್ಯ ಪ್ರತಿಪಕ್ಷದ ಸದಸ್ಯರು ನಡೆಸುತ್ತಿರುವ ಧರಣಿಗೆ ಸಂಬಂಧಪಟ್ಟಂತೆ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಿನಾಂಕ 11ನೇ ಜುಲೈ 2005ರಂದು ನೀಡಿದ ಸ್ವಯಂಪ್ರೇರಿತ ಹೇಳಿಕೆ.

ಅಮೆರಿಕಾದಲ್ಲಿರುವ ಒಕ್ಕಲಿಗರ ಪರಿಷತ್‌ನವರ ಆಹ್ವಾನದ ಮೇರೆಗೆ ಅಮೆರಿಕಾ ಸಂಯುಕ್ತ ಸಂಸ್ಥಾನದ ಡೆಟ್ರಾಯಿಟ್‌ನಲ್ಲಿ ಜುಲೈ ತಿಂಗಳ 1,2 ಮತ್ತು 3ನೇ ದಿನಾಂಕಗಳಂದು ಜರುಗಿದ ಒಕ್ಕಲಿಗರ ಪರಿಷತ್‌ನ 9ಸಮಾವೇಶ ದಲ್ಲಿ